## 15-09-2026

VIDYAVARDHAKA SANGHA(R), MYSURU

VIDYAVARDHAKA FIRST GRADE COLLEGE

Sheshadri Iyer Road, Mysuru – 570 001

Department of Political Science
& IQAC Cell Jointly Organizing

# INTERNATIONAL DAY OF DEMOCRACY

**Chief Guest**
Prof. Mahadevamma
Assistant Professor
GFGC, Talakadu

**Presided by**
Dr. S. MariGowda
Principal, VVFGC, Mysuru

**Presence**
Dr. Arpuda Raj
HOD, Dept. of Political Science
VVFGC, Mysuru

**Prof. Shashidhar**
Staff Advisor
VVFGC, Mysuru

Date: 15-09-2026 | Time: 12.00 PM | Venue: Chikkaboriah Hall

## ಜನಸಾಮಾನ್ಯರ ಜೀವನ ಶೈಲಿಯೇ ಪ್ರಜಾಪ್ರಭುತ್ವ

**- ಪ್ರೊ.ಮಹದೇವಮ್ಮ**

ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರುವ ವ್ಯವಸ್ಥೆಯೇ ಪ್ರಜಾಪ್ರಭುತ್ವ. ಪ್ರಜಾಪ್ರಭುತ್ವವನ್ನು ಕೇವಲ ಮತದಾನಕ್ಕೆ ಸೀಮಿತಗೊಳಿಸದೆ ಜನರ ಸಕ್ರಿಯ ಭಾಗವಹಿಸುವಿಕೆ ಮತ್ತು ಸಾಮಾಜಿಕ ಪರಿವರ್ತನೆಯತ್ತ ಸಾಗಬೇಕು ಎಂದು ತಲಕಾಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಪ್ರೊ.ಮಹದೇವಮ್ಮ ಅಭಿಪ್ರಾಯಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗವು ಐಕ್ಯೂಎಸಿ ಘಟಕದ ಸಹಯೋಗದೊಂದಿಗೆ ಇಂದು ಆಯೋಜಿಸಿದ್ದ **"ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ"** ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡುತ್ತಿದ್ದರು. ವಿಶ್ವದಾದ್ಯಂತ ಪ್ರಜಾಪ್ರಭುತ್ವದ ಮಹತ್ವವನ್ನು ಸಾರುವ ಉದ್ದೇಶದಿಂದ ಪ್ರತಿವರ್ಷ ಸೆಪ್ಟೆಂಬರ್ 15 ರಂದು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಪ್ರಜಾಪ್ರಭುತ್ವವು ಜನರ ಹಕ್ಕುಗಳು, ಸ್ವಾತಂತ್ರ್ಯ, ಸಮಾನತೆ ನ್ಯಾಯ ಮತ್ತು ಜನರ ಪಾಲ್ಗೊಳ್ಳುವಿಕೆಗೆ ಮಹತ್ವ ನೀಡುವ ಆಡಳಿತ ವ್ಯವಸ್ಥೆಯಾಗಿದೆ. ಸ್ವತಂತ್ರ ಮತ್ತು ನ್ಯಾಯ ಸಮ್ಮತ ಚುನಾವಣೆ, ಅಭಿವ್ಯಕ್ತಿ ಸ್ವಾತಂತ್ರ್ಯ, ಕಾನೂನಿನ ಆಳ್ವಿಕೆ, ನಾಗ'ರೀಕರ ಭಾಗವಹಿಸುವಿಕೆ ಮತ್ತು ಒಳಗೊಳ್ಳುವಿಕೆ ಪ್ರ'ಜಾಪ್ರಭುತ್ವದ ಪ್ರಮುಖ ಅಂಶಗಳಾಗಿವೆ. ರಾಜ್ಯಶಾಸ್ತ್ರ ತಜ್ಞ ಶ್ರೀ.ರಜನಿ ಕೊಠಾರಿ ಅವರ ಪ್ರ'ಕಾರ ಸಾರ್ವಜನಿಕರು ಮಾಹಿತಿಯುಕ್ತರಾಗಬೇಕು, ಸಾರ್ವಜನಿಕ ವಿಚಾರಗಳಲ್ಲಿ ಸಕ್ರಿಯರಾಗಬೇಕು, ಪರಸ್ಪರ ಭಿನ್ನಾಭಿಪ್ರಾಯಗಳನ್ನು ಗೌರವಿಸಬೇಕು, ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪಾಲಿಸುವುದು ನಾಗರೀಕರಾಗಿ ನಾವು ಏನು ಮಾಡಬಹುದು ಎಂಬುವುದಕ್ಕೆ ಉದಾಹರಣೆಗಳಾಗಿವೆ ಎಂದಿದ್ದಾರೆ. ವಿ–ಡೆಮ್ ಸಂಸ್ಥೆ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ಬಗ್ಗೆ ತಿಳಿಸುವುದೇನೆಂದರೆ ಜಗತ್ತಿನಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು 7% ಜನರು ಮಾತ್ರ ಪರಿಪೂರ್ಣವಾಗಿ ಹೊಂದಿರುತ್ತಾರೆ. ಶೇ.74ರಷ್ಟು ಜನ (600 ಕೋಟಿ) ಇನ್ನೂ ಆಡಳಿತದಲ್ಲಿ ಇದ್ದಾರೆ ಎಂದು ವರದಿ ಮಾಡಿದೆ. ಜಿಡಿಸಿ ಸಂಸ್ಥೆ ಪ್ರಕಾರ ಪ್ರಜಾಪ್ರಭುತ್ವ ಜನರಿಗೆ ತಲುಪದೇ ಇರುವುದು, ಜನರಿಗೆ ಸರಿಯಾದ ಮಾಹಿತಿ ತಲುಪದೇ ಇರುವುದು, ಬಂಡ'ವಾಳಷಾಹಿ ವ್ಯವಸ್ಥೆ ಇನ್ನು ಉಳಿದಿರುವುದು, ಚುನಾವಣೆ ನಿರಂಕುಶ ಅಧಿಕಾರವನ್ನು ಹೊಂದಿರುವುದು ಪ್ರ'ಜಾಪ್ರಭುತ್ವದ ಅರ್ಥ ಜನಸಾಮಾನ್ಯರಿಗೆ ತಲುಪಿಸುವಲ್ಲಿ ಸವಾಲುಗಳಾಗಿವೆ ಎಂದು ವರದಿ ಮಾಡಿದೆ. ವಿಶ್ವದ 193 ದೇಶಗಳಲ್ಲಿ 104ನೇ ಸ್ಥಾನದಲ್ಲಿ ಭಾರತವಿದೆ. ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಮತದಾನದ ಹಕ್ಕನ್ನು ದುರುಪಯೋಗಪಡಿಸಿಕೊಳ್ಳುವ ವ್ಯವಸ್ಥೆ ನಮ್ಮದಾಗಿದ್ದು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮರೆಯುತ್ತಿದ್ದೇವೆ ಹಾಗಾಗಿ ಹಣ ತೆಗೆದುಕೊಂಡು ಮತಚಲಾಯಿಸುವ ವ್ಯವಸ್ಥೆ ರದ್ದಾಗಬೇಕು. ಇಂದಿನ ವಿದ್ಯಾರ್ಥಿಗಳಿಗೆ ಸಮಾಜದ' ವ್ಯವಸ್ಥೆಗಳ ಬಗ್ಗೆ ಪ್ರಶ್ನೆ ಮಾಡುವ ಧ್ವನಿ ಇಲ್ಲದಂತಾಗಿದೆ. ಆದ್ದರಿಂದ ಎಲ್ಲಾ ವಿದ್ಯಾರ್ಥಿಗಳನ್ನು ಜಾಗೃತಿಗೊಳಿಸಲು ಇಂತಹ ವಿಶೇಷ ಉಪನ್ಯಾಸಗಳನ್ನು ಆಯೋಜಿಸಲಾಗಿದೆ ಎಂದರು.

ಅಧ್ಯಾಪಕ ಸಲಹೆಗಾರ ಶ್ರೀ.ಶಶಿಧರ್.ಎಸ್, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದ ಕಾರ್ಯಕ್ರಮವನ್ನು ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಅರ್ಬುದರಾಜು ಸ್ವಾಗತಿಸಿದರೆ, ವಿದ್ಯಾರ್ಥಿನಿ ಕು. ಕಲ್ಯಾಣಿ ನಿರೂಪಿಸಿ, ರಾಜ್ಯಶಾಸ್ತ್ರ ವಿಭಾಗದ ಶ್ರೀಮತಿ ಆಶಾ.ಕೆ.ಎನ್ ವಂದಿಸಿದರು.


NATIONAL DAY OF
DEMOCRACY
Chief Guest
Dr. ARPUDARAJU
Dr. S MARIGOWDA
Prof.MAHADEVAMMA






INTERNATIONAL DAY OF
DEMOCRACY






What is Democracy?







